ಇದು ನಾನು ಖಂಡಿತವಾಗಿಯೂ ಮಾಡುತ್ತೇನೆ. ಇನ್ನು ಸೋರಿಕೆ ವಿಚಾರ, ವರ್ಗಾವಣೆ ವಿಚಾರದಲ್ಲಿ ಖಂಡಿತವಾಗಿಯೂ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಇದರ ಬಗ್ಗೆ ಖಂಡಿತವಾಗಿಯೂ ಆಲೋಚನೆ ಮಾಡುತ್ತೇನೆ. ಎಲ್ಲಾ ವಾಣಿಜ್ಯೋದ್ಯಮಿಗಳೂ ತಮ್ಮ ಬಂದ್‌ನ್ನು ಬಿಡಲಿ, ಮಾತುಕತೆಗೆ ಬರುವುದಿದ್ದರೆ, ಖಂಡಿತವಾಗಿಯೂ ಮಾತನಾಡುತ್ತೇನೆ. ಪರ್ಯಾಯ ವಿಚಾರಗಳಿದ್ದರೂ ಕೂಡ, ನಾನು ಮಾತನಾಡಲು ಸಿದ್ಧನಿದ್ದೇನೆ. ಆದರೆ ಅವರು ಕರ ನಿರಾಕರಣೆಗೆ ಏನು ಕರೆ ಕೊಟ್ಟಿದ್ದಾರೆ, ಅದು ಪೂರ್ತಿ ಖಂಡನೀಯ. ಈ ರೀತಿ ಹಿಂದೆಯೂ ಕೊಡಬಾರದು, ಮುಂದೆಯೂ ಕೊಡಬಾರದು. After all it is your Government. ಇದು ಎಲ್ಲರ ಸರ್ಕಾರ, ನಾವೇ ಮಾಡತಕ್ಕ, ಕಟ್ಟಿರತಕ್ಕ ಸರ್ಕಾರ, ಇದರಲ್ಲಿ ಕರನಿರಾಕರಣೆ ಎಂದು ಹೇಳಿದರೆ, ಬ್ರಿಟೀಷರಂತೆ ನಾವೇನು ಸಂಪನ್ಮೂಲ ಹೋತ್ತುಕೊಂಡು ಹೋಗುವುದಿಲ್ಲ. ರಾಜ್ಯದ ಜನಗಳಿಗೆ, ಜನ ಕಲ್ಯಾಣಕ್ಕೆ, ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಉಪಯೋಗವಾಗುತ್ತದೆಯೇ ಹೊರತು, ಅನ್ಯಥಾ ಈ ಹಣ ಹೋಗುವುದಿಲ್ಲ.

ಶ್ರೀ ಬಿ. ಎಚ್. ಬನ್ನಿಕೋಡ್: ಮಾನ್ಯ ಅಧ್ಯಕ್ಷರೇ, ನನಗೆ ಅವಕಾಶ ಮಾಡಿಕೊಡುತ್ತೇನೆಂದು ಹೇಳಿದ್ದಿರಿ.

ಅಧ್ಯಕ್ಷರು: ನಾಳೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ: ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘದಲ್ಲಿ ರೈತರು ಮಾಡಿರತಕ್ಕಂಥ ಸಾಲಕ್ಕೆ ರೈತರ ಜಮೀನುಗಳು ಹರಾಜು ಆಗುತ್ತಿವೆ. ಅದರ ಬಗ್ಗೆ ಅವಕಾಶ ಕೊಡುತ್ತೇನೆ ಎಂದು ಹೇಳಿದ್ದೀರಿ ಇವತ್ತು ಅಲ್ಲದಿದ್ದರೂ ನಾಳೆ ಅವಕಾಶ ಕೊಡಿ.

ಅಧ್ಯಕ್ಷರು: ನಾಳೆ ಅವಕಾಶ ಮಾಡಿಕೊಡುತ್ತೇನೆ. (ಶ್ರೀ ಬಿ. ಎಂ. ಇದಿನಬ್ಬನವರು ಗೈರುಹಾಜರಾಗಿದ್ದಾರೆ)

ಅಧ್ಯಕ್ಷರು: ದೇಶಪಾಂಡೆಯವರು ಮತ್ತು ಏಕಾಂತಯ್ಯನವರೆ ತಾವು ಕಳುಹಿಸಿದ ಗಮನ ಸೆಳೆಯುವ ಸೂಚನೆ ಬೇರೆ ದಿವಸ ತೆಗೆದುಕೊಳ್ಳುತ್ತೇನೆ. ಕಾರಣ ಮಾನ್ಯ ಮಂತ್ರಿಗಳು ಡೆಲ್ಲಿಗೆ ಹೋಗಿದ್ದಾರೆ.

ಶ್ರೀ ಆರ್. ವಿ. ದೇಶಪಾಂಡೆ: ಆಯಿತು.

ಅಧ್ಯಕ್ಷರು: ಸಭೆಯನ್ನು ಈಗ ಮುಂದೂಡಿ ಮತ್ತೆ ಮಧ್ಯಾಹ್ನ 2-15ಕ್ಕೆ ಸೇರಲ್ಪಡುತ್ತದೆ.
(ಸದನವು ಪುನಃ 2-35 ಗಂಟೆಗೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ವಿ. ಎಸ್. ಕೌಜಲಗಿಯವರು ಪೀಠವನ್ನು ಅಲಂಕರಿಸಿದರು)

<u>ನಿಯಮ 334ರ ಮೇರೆಗೆ</u>
<u>ಬೆಳಗಾವಿ ಜಿಲ್ಲೆ ಹುಕ್ಕೇರಿ ಹಾಗೂ ಗೋಕಾಕ್ ತಾಲ್ಲೂಕಿನ ಪ್ರೇಕ್ಷಣೆಯ ಸ್ಥಳಗಳನ್ನು ಪ್ರವಾಸಿ ಕೇಂದ್ರಗಳಾಗಿ ಅಭಿವೃದ್ಧಿ.</u>

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ): ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆ ಹುಕ್ಕೇರಿ ಹಾಗೂ ಗೋಕಾಕ್ ತಾಲ್ಲೂಕಿನ ಪ್ರೇಕ್ಷಣೆಯ ಸ್ಥಳಗಳನ್ನು ಪ್ರವಾಸಿಗರಿಗಾಗಿ

ಆಕರ್ಷಣೀಯಗೊಳಿಸುವ ಹಿನ್ನೆಲೆಯಲ್ಲಿ ಯಾವ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ? ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ನದಿಯ ಮೇನೆ ಬರುವ ಗೊಡಚಿನಮಲಕಿ ಜಲಪಾತಕ್ಕೆ ಹೋಗುವ ದಾರಿ ಹಾಗೂ ತಂಗುಧಾಮ ಅದೇರೀತಿ ಕೊಣ್ಣೂರು ಮತ್ತು ಧೂಪದಾಳ ಹತ್ತಿರ ಪಕ್ಷಿಧಾಮ ನಿರ್ಮಿಸಲು ಸರ್ಕಾರದ ಕಾರ್ಯಕ್ರಮ ಏನು? ಗೋಕಾಕ್ ಫಾಲ್ಸ್, ಹಿಡಕಲ್ ಜಲಾಶಯದ ಪರಿಸರ ಮತ್ತು ಮಲಪ್ರಭಾ ಕಿತ್ತೂರ್ ಚೆನ್ನಮ್ಮನ ರಾಜಧಾನಿ ಹೀಗೆ ಆಕರ್ಷಣೀಯ ಸ್ಥಳಗಳನ್ನು ನೋಡಲು ಪ್ರವಾಸಿಗರಿಗೆ ಅನುಕೂಲವಾಗುವಂತೆ ಪ್ರತಿಯೊಂದು ತಾಲ್ಲೂಕಿನಿಂದ ರವಿವಾರ ಒಂದು ಬಸ್ಸನ್ನು ಬಿಡುವ ಬೇಡಿಕೆಯನ್ನು ಕೆ.ಎಸ್.ಆರ್.ಟಿ.ಸಿ.ಗೆ ಮಾಡುವುದರಲ್ಲಿ ಸರ್ಕಾರದ ಕಾರ್ಯಕ್ರಮ ಏನು ಎನ್ನುವುದನ್ನು ವಿಧಾನಸಭೆಯಲ್ಲಿ ಮಾನ್ಯ ಪ್ರವಾಸೋದ್ಯಮ ಮಂತ್ರಿಗಳಿಂದ ಹೇಳಿಕೆಯನ್ನು ಬಯಸಿದ್ದೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ: (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಪ್ರವಾಸೋದ್ಯಮ ಮಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ. ಹುಕ್ಕೇರಿ ಬೆಳಗಾಂನಿಂದ 48 ಕಿ.ಮಿ. ದೂರದಲ್ಲಿದೆ. ಇದನ್ನು ಮೊದಲು 'ಹೂವಿನ ಕೇರಿ' ಎಂದು ಕರೆಯಲಾಗುತ್ತಿತ್ತು. ಆದಿಲ್‌ಷಾಹಿ ಕಾಲದಲ್ಲಿ ಇಲ್ಲಿ ಬೆಳೆದ ಉತ್ತಮ ಗುಲಾಬಿ ಹೂಗಳನ್ನು ಬಿಜಾಪುರಕ್ಕೆ ಕಳುಹಿಸಲಾಗುತ್ತಿತ್ತು. ಐನ್-ಉಲ್-ಮುಲ್ಕ್‌ಗಿಲಾನಿ ಕಾಲದಲ್ಲಿ ಕಟ್ಟಿಸಿದ ಹುಕ್ಕೇರಿಯ ಬೃಹತ್ ಕೋಟೆ ಮತ್ತು ಗೋರಿ ಇಲ್ಲಿನ ಆಕರ್ಷಣೆಗಳು.

ಗೋಕಾಕ್‌ನಿಂದ 15 ಕಿ.ಮಿ. ದೂರದಲ್ಲಿರುವ ಗೊಡಚಿನಮಲಕಿ ಜಲಪಾತ ಅತ್ಯಂತ ರಮಣೀಯ; ಪ್ರಕೃತಿಯ ಮಡಿಲಲ್ಲಿದೆ. ಇದನ್ನು ಮಾರ್ಕಂಡೇಯ ಜಲಪಾತವೆಂದೂ ಕರೆಯುತ್ತಾರೆ. ಇಲ್ಲಿ ಮಾರ್ಕಂಡೇಯ ನದಿ 25 ಮಿಾಟರ್ ಎತ್ತರದಿಂದ ಧುಮುಕಿ ಅನಂತರ ಸ್ವಲ್ಪ ದೂರದಲ್ಲಿ ಪುನಃ 18 ಮಿಾಟರ್ ಎತ್ತರದಿಂದ ಧುಮುಕುತ್ತದೆ. ಈ ಜಲಪಾತಕ್ಕೆ ಹೋಗುವ ದಾರಿಯ ಅಭಿವೃದ್ಧಿಯ ಬಗ್ಗೆ ಲೋಕೋಪಯೋಗಿ ಇಲಾಖೆಯನ್ನು ವಿನಂತಿಸಲಾಗುವುದು. ಗೊಡಚಿನಮಲಕಿಯಲ್ಲಿ ತಂಗುಧಾಮ ನಿರ್ಮಿಸಲು ಮುಂದೆ ಬರುವ ಖಾಸಗಿ ಉದ್ಯಮಗಳಿಗೆ ರಾಜ್ಯ ಪ್ರವಾಸೋದ್ಯಮ ನೀತಿಯ ಪ್ರಕಾರ ಬಂಡವಾಳ ಹೂಡಿಕೆ ಮೇಲೆ ಶೇಕಡ 20 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು.

ಕೊಣ್ಣೂರು ಮತ್ತು ಧೂಪದಾಳ ಹತ್ತಿರ ಪಕ್ಷಿಧಾಮ ನಿರ್ಮಿಸಲು ಸಾಧ್ಯತೆಯ ಬಗ್ಗೆ ರಾಜ್ಯ ಅರಣ್ಯ ಇಲಾಖೆಯನ್ನು ಕೇಳಿಕೊಳ್ಳಲಾಗುವುದು.

ಪ್ರೇಕ್ಷಣೀಯ ಸ್ಥಳಗಳಾದ ಗೋಕಾಕ್ ಫಾಲ್ಸ್, ಹಿಡಕಲ್ ಜಲಾಶಯ, ಮಲಪ್ರಭಾ ಮತ್ತು ಕಿತ್ತೂರಿಗೆ ಬೆಳಗಾಂ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಿಂದ ಒಂದು ಕೆಎಸ್‌ಆರ್‌ಟಿಸಿ ಬಸ್ಸನ್ನು ಓಡಿಸುವ ಸಾಧ್ಯತೆಯ ಬಗ್ಗೆ ಕೆ.ಎಸ್.ಆರ್.ಟಿ.ಸಿ.ಯನ್ನು ಕೇಳಿಕೊಳ್ಳಲಾಗುವುದು.

ಗೋಕಾಕ್ ತಾಲ್ಲೂಕಿನ ಗೋಕಾಕ್ ಜಲಪಾತ, ಹುಕ್ಕೇರಿ ತಾಲ್ಲೂಕಿನ ಘಟಪ್ರಭಾ, ಬೈಲಹೊಂಗಲ ತಾಲ್ಲೂಕಿನ ಕಿತ್ತೂರುಗಳನ್ನು ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ (ಸಿ) ಗುಂಪಿನಡಿಯಲ್ಲಿ ಸೇರಿಸಿದ್ದು ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಉದ್ಯಮಿಗಳಿಗೆ ಬಂಡವಾಳ ಹೂಡಿಕೆ ಮೇಲೆ ಶೇಕಡ 25 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಮತ್ತು ಉತ್ತೇಜನಗಳನ್ನು ನೀಡಲಾಗುವುದು. ಗೋಕಾಕ್ ಮತ್ತು ಹುಕ್ಕೇರಿ ತಾಲ್ಲೂಕಿನ ಉಳಿದ ಪ್ರೇಕ್ಷಣೀಯ ಸ್ಥಳಗಳು (ಬಿ) ಗುಂಪಿನಡಿ ಬರುತ್ತವೆ.

ಇಲಾಖೆ ಬೆಳಗಾಂ ಜಿಲ್ಲೆಯ ವರ್ಣದ ಕಿರುಹೊತ್ತಿಗೆಯನ್ನು ಹೊರತಂದಿದೆ.

2. ಧರ್ಮದತ್ತಿ ಇಲಾಖೆಯಲ್ಲಿ ಏಕರೂಪ ಕಾಯಿದೆ

ಶ್ರೀ ಹೆಚ್. ವೈ. ಮೇಟಿ (ಗುಳೇದಗುಡ್ಡ) ಮಾನ್ಯ ಅಧ್ಯಕ್ಷರೇ, ರಾಜ್ಯ ಸರ್ಕಾರವು ಧರ್ಮದತ್ತಿ ಇಲಾಖೆಯಲ್ಲಿ ಏಕನೀತಿ ಕಾಯ್ದೆಯನ್ನು ಮಾಡದೆ ಜಿಲ್ಲೆಗೊಂದು ಕಾಯ್ದೆಯನ್ನು ಮಾಡಿ ಹಿಂದುಳಿದ ಜಿಲ್ಲೆಗಳಿಗೆ ಬಹಳ ಅನ್ಯಾಯವಾಗಿರುತ್ತದೆ. ಉದಾಹರಣೆಗೆ ಮುಂಬೈ - ಕರ್ನಾಟಕಕ್ಕೆ ಒಂದು ಕಾಯ್ದೆಯಾದರೆ, ಹೈದರಾಬಾದ್ - ಕರ್ನಾಟಕಕ್ಕೆ ಇನ್ನೊಂದು ಕಾಯ್ದೆ ಮತ್ತು ಉತ್ತರ - ಕರ್ನಾಟಕಕ್ಕೆ ಮತ್ತೊಂದು ಕಾಯ್ದೆಯಾಗಿರುತ್ತದೆ. ಆದರೆ, ಈ ಕಾಯ್ದೆಯಿಂದ ಆಯಾ ಕಾಯ್ದೆಗಳಿಗೆ ಅನುಗುಣವಾಗಿ ಮುಂದುವರಿದ ಜಿಲ್ಲೆಗಳಿಗೆ ಹೆಚ್ಚಿಗೆ ಅನುಕೂಲವಾಗುತ್ತದೆ. ಆದ್ದರಿಂದ ಈಗಿನ ಈ ವಿವಿಧ ಕಾಯ್ದೆಗಳನ್ನು ರದ್ದುಪಡಿಸಿ ಸರ್ಕಾರ ಎಲ್ಲಾ ಜಿಲ್ಲೆಗಳಿಗೂ ಒಂದೇ ಏಕರೂಪ ಕಾಯ್ದೆಯನ್ನು ಜಾರಿಗೆ ತಂದು ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿಗೆ ಅನುಕೂಲ ಮಾಡಿಕೊಡಬೇಕೆಂದು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ: (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ ಮಾನ್ಯ ಕಂದಾಯ ಸಚಿವರ ಪರವಾಗಿ ಈ ಹೇಳಿಕೆಯನ್ನು ಮಾಡುತ್ತೇನೆ.

ರಾಜ್ಯ ಧಾರ್ಮಿಕ ಮತ್ತು ದತ್ತಿ ಇಲಾಖೆಯ ನಿಯಂತ್ರಣದಲ್ಲಿ 43,217 ಧಾರ್ಮಿಕ ಸಂಸ್ಥೆಗಳು ಇರುತ್ತದೆ. ಈ ಧಾರ್ಮಿಕ ಸಂಸ್ಥೆಗಳು ರಾಜ್ಯದಲ್ಲಿ ಹಾಲಿ ಚಾಲ್ತಿಯಲ್ಲಿರುವ 4 ಕಾಯಿದೆಗಳು ಮತ್ತು 1 ರೆಗ್ಯುಲೇಷನ್‌ಗೆ ಒಳಪಟ್ಟಿದ್ದು ವಿವರಗಳು ಕೆಳಕಂಡಂತಿದೆ:

ಕ್ರ. ಸಂ.	ಕಾಯಿದೆಯ ಹೆಸರು	ಅಧೀನದಲ್ಲಿರುವ ಧಾರ್ಮಿಕ ಸಂಸ್ಥೆಗಳ ಸಂಖ್ಯೆ
1.	ಮೈಸೂರು ಮತೀಯ ಮತ್ತು ಧರ್ಮಾರ್ಥ ಸಂಸ್ಥೆಗಳ ಕಾಯ್ದೆ 1927 (ಹಳೇ ಮೈಸೂರು ಪ್ರಾಂತ್ಯದ 10 ಜಿಲ್ಲೆಗಳು)	18,754
2.	ಮದ್ರಾಸ್ ಹಿಂದೂ ಧಾರ್ಮಿಕ ಮತ್ತು ಧರ್ಮಾರ್ಥ ಉಂಬಳಿಗಳ ಕಾಯ್ದೆ 1951 (ಹಳೇ ಮದರಾಸು ಪ್ರಾಂತ್ಯದ ದಕ್ಷಿಣ ಕನ್ನಡ ಜಿಲ್ಲೆ, ಬಳ್ಳಾರಿ ಮತ್ತು ಮೈಸೂರು ಜಿಲ್ಲೆಯ ಕೊಳ್ಳೇಗಾಲ ತಾಲ್ಲೂಕು)	2,722
3.	ಮುಂಬಯಿ ಸಾರ್ವಜನಿಕ ಜಮ್ಮೆಗಳ ಕಾಯ್ದೆ 1950 (ಹಳೇ ಮುಂಬಯಿ ಪ್ರಾಂತ್ಯದ 4 ಜಿಲ್ಲೆಗಳು)	12,373
4.	ಕೊಡಗು ದೇವಾಲಯಗಳ ನಿಧಿ ನಿರ್ವಹಣೆ ಕಾಯ್ದೆ 1956 (ಹಳೇ ಕೊಡಗು ಪ್ರಾಂತ್ಯ)	7